# ಸಂಪಾದಕೀಯ

# ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ಸಾರ್ಥಕ ಬದುಕು

## ದಿವ್ಯತೆಯಿಂದ ಸಾರ್ಥಕತೆ

**ಮನುಷ್ಯ**ನಿಗೆ ಯಾವುದು ಸುಖವನ್ನು ನೀಡುತ್ತದೆ? ಇಂದ್ರಿಯ ಪ್ರಪಂಚದ ಅನುಭವವೇ ಅಥವಾ ಅದರ ತ್ಯಾಗವೆ? ಇಂದ್ರಿಯ ಪ್ರಪಂಚದ ಅನುಭವ ನಿಜವಾದ ಸುಖ ಸಂತೃಪ್ತಿಗಳನ್ನು ನೀಡಲಾರದು ಎಂಬುದು ಇಂದ್ರಿಯ ಸುಖವನ್ನೇ ಪ್ರಧಾನವೆಂದು ಪರಿಗಣಿಸಿರುವ ಬಹುಜನರ ಜೀವನದಲ್ಲಿ ಕಂಡುಬರುವ ಅಶಾಂತಿ, ನಿಃಸಾರ್ಥಕತೆ, ನೈರಾಶ್ಯ ಮನೋಭಾವಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಆಧುನಿಕ ವಿಜ್ಞಾನವು ಪ್ರಾಪಂಚಿಕ ಸುಖವನ್ನು ಅನುಭವಿಸುವ ಜನರ ಸಾಮರ್ಥ್ಯವನ್ನು ಹಾಗೂ ಸುಖಸಾಧನಗಳನ್ನು ಕಲ್ಪನಾತೀತವಾಗಿ ವೃದ್ಧಿಸಿದೆ. ಆದರೆ ಜನರ ಸುಖದ ಮೊತ್ತ ವೃದ್ಧಿಯಾದಂತೆ ಕಂಡುಬರುವುದಿಲ್ಲ. ಸುಖಸಾಧನಗಳು ವೃದ್ಧಿಯಾದಂತೆಲ್ಲ ಸುಖ ಅದಕ್ಕನುಗುಣವಾಗಿ ಕಡಮೆಯಾಗುತ್ತ ಬರುವುದು ಒಂದು ಸಾರ್ವತ್ರಿಕ ನಿಯಮವೆಂದು ಕಂಡುಬರುತ್ತದೆ.

> **ಸುಖದ ರಹಸ್ಯವಿರುವುದು ತ್ಯಾಗದಲ್ಲಿ.**
>
> —ಆಂಡ್ರಿವ್ ಕಾರ್ನೆಗಿ

ಜೀವನವೆಂಬುದು ಸಾಮಾನ್ಯ ಜಡವಸ್ತುವಿಗಿಂತ ಹಿರಿದಾದದ್ದು, ಹೆಚ್ಚು ಮೌಲ್ಯವುಳ್ಳದ್ದು. ನಿಜವಾಗಿ ಜೀವನವೇ ಎಲ್ಲ ವಸ್ತುಗಳಿಗೂ ಮೌಲ್ಯವನ್ನು ನೀಡುವಂತಹುದು. ಪ್ರಪಂಚದ ಅತ್ಯಂತ ಬೆಲೆಬಾಳುವ ವಸ್ತುಗಳೂ ತಮ್ಮ ಮೌಲ್ಯವನ್ನು ಮನುಷ್ಯನ ಜೀವನದಿಂದ ಪಡೆಯುತ್ತವೆ. ಅವನರಸುವ ಅತ್ಯಂತ ಹಿರಿದಾದ ಪ್ರಾಪಂಚಿಕ ಸುಖವೂ ಅವನಿಂದಾಗಿಯೇ ಮೌಲ್ಯವನ್ನು ಪಡೆದಿರುವುದು. ಅವನಿಂದ ಮೌಲ್ಯವನ್ನು ಪಡೆದ ವಸ್ತುಗಳಿಗೆ ಮತ್ತು ಸುಖಕ್ಕೆ ಅವನೇ ದಾಸನಾಗುವುದು ಶೋಚನೀಯ. ತನ್ನ ಜೀವನದ ಮೌಲ್ಯವನ್ನು ಕಡೆಗಣಿಸಿದಾಗ ಈ ರೀತಿಯಾಗುತ್ತದೆ.

ಇಂತಹ ಮೌಲ್ಯವಂತವಾದ ಜೀವನಕ್ಕೆ ಪ್ರಾಪಂಚಿಕ ವಿಷಯ ವಸ್ತುಗಳು ಸಾರ್ಥಕತೆಯನ್ನು ನೀಡಲಾರವು. ಜೀವನವೇ ಅವಕ್ಕೆ ಸಾರ್ಥಕತೆಯನ್ನು ನೀಡಬೇಕಾಗಿದೆ. ಈ ಜೀವನಕ್ಕೆ ಸಾರ್ಥಕತೆಯುಂಟಾಗಬೇಕಾದರೆ ಅದಕ್ಕಿಂತಲೂ ಹಿರಿದಾದ ವಸ್ತುವೊಂದನ್ನು ನಾವು ಅರಸಬೇಕು. ಈ ಅರಸುವಿಕೆ, ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಹೋರಾಟ ಜೀವನಕ್ಕೆ ನಿಜವಾದ ಸಾರ್ಥಕತೆಯನ್ನು ನೀಡುತ್ತದೆ. ಆ ಹಿರಿದಾದ ವಸ್ತುವೇ ನಮ್ಮ ವ್ಯಕ್ತಿತ್ವದ ಸಾರವಾದ ದಿವ್ಯತೆ ಅಥವಾ ಭಗವದ್ವಸ್ತು. ಈ ದಿವ್ಯತೆಯ ಜೀವನವೇ, ಭಗವತ್ ಕೇಂದ್ರಿತ ಜೀವನವೇ ನಿಜವಾದ ಸಾರ್ಥಕ ಬದುಕು ಮತ್ತು ಇದೇ ಪರಮ ಸುಖವನ್ನು ನೀಡುವಂತಹುದು ಎಂಬುದನ್ನು ಶ್ರೀರಾಮಕೃಷ್ಣರು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು.

## 'ಹಣ್ಣನ್ನು ತಿನ್ನಿ'

ಇದಕ್ಕೆ ದೃಷ್ಟಾಂತವಾಗಿ ಶ್ರೀರಾಮಕೃಷ್ಣರು ಒಂದು ಉದಾಹರಣೆಯನ್ನು ನೀಡುತ್ತಿದ್ದರು. ಕೆಲವು ಸ್ನೇಹಿತರು ಒಂದು ಮಾವಿನ ತೋಪಿಗೆ ಹೋದರು. ಒಬ್ಬನು ಅಲ್ಲಿ ಎಷ್ಟು ಬಗೆಯ ಮರಗಳಿವೆ—ತೋತಾಪುರಿ ಎಷ್ಟಿವೆ, ಮಲಗೋವ ಎಷ್ಟಿವೆ, ರಸಪುರಿ ಎಷ್ಟಿವೆ—ಎಂಬುದನ್ನು ಎಣಿಸತೊಡಗಿದನು. ಒಂದೊಂದು ಮರಕ್ಕೂ ಎಷ್ಟು ವರ್ಷಗಳಾಗಿರಬಹುದು ಎಂಬುದನ್ನು ಲೆಕ್ಕ ಹಾಕತೊಡಗಿದ ಇನ್ನೊಬ್ಬ ಸ್ನೇಹಿತ. ತೋಟದ ವಿಸ್ತೀರ್ಣವನ್ನು ಅಳೆಯತೊಡಗಿದ ಇನ್ನೊಬ್ಬ. ಮತ್ತೊಬ್ಬನು ಮರಗಳ ರೆಂಬೆಗಳನ್ನು ಎಣಿಸತೊಡಗಿದ. ಇನ್ನೋರ್ವನು ಎಲೆಗಳನ್ನು ಎಣಿಸತೊಡಗಿದ. ಹೀಗೆ ಒಬ್ಬೊಬ್ಬರು ಒಂದೊಂದು ಕಾರ್ಯದಲ್ಲಿ ನಿರತರಾದರು. ಆದರೆ ಅವರಲ್ಲಿ ಜಾಣನಾದ ಒಬ್ಬನು ಮಾತ್ರ ನೇರವಾಗಿ ಮರವನ್ನು ಹತ್ತಿ ಹಣ್ಣುಗಳನ್ನು ತಿನ್ನತೊಡಗಿದ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ನೀವು ಬಂದಿರುವುದು ಹಣ್ಣನ್ನು ತಿನ್ನುವುದಕ್ಕೆ, ಅದನ್ನು ತಿಂದು ಸಂತೋಷದಿಂದಿರಿ' ಎಂದು.

> **ಜೀವನದ ಗುರಿ ದೇವರಂತಿರುವುದು. ದೇವರನ್ನನುಸರಿಸುವವನು ದೇವರಂತಾಗುವನು.**
>
> —ಸಾಕ್ರೆಟಿಸ್

ಹಣ್ಣನ್ನು ತಿನ್ನುವುದು ಎಂದರೆ ಏನು? ಹಣ್ಣು ಮರದ ಸಾರಭೂತ ವಸ್ತು. ಮಾವಿನ ಮರದಲ್ಲಿ ಹಣ್ಣೇ ಅತ್ಯಂತ ಮುಖ್ಯವಾದುದು. ಅದರ ಕಾಂಡ, ಕೊಂಬೆ, ಎಲೆಗಳೂ ಉಪಯೋಗಕ್ಕೆ ಬರಬಹುದು. ಆದರೆ ಯಾರೂ ಅವುಗಳಿಗಾಗಿ ಮಾವಿನ ಮರಗಳನ್ನು ಬೆಳೆಸುವುದಿಲ್ಲ—ಕೇವಲ ಹಣ್ಣಿಗಾಗಿಯೇ ಬೆಳೆಸುತ್ತಾರೆ. ಹಾಗೆಯೇ ಈ ಪ್ರಪಂಚದ ಸಾರವೇ ಭಗವದ್ವಸ್ತು. ಬೇರೆ ಎಲ್ಲವೂ ಗೌಣ. ನಾವು ಇಲ್ಲಿಗೆ ಬಂದಿರುವುದೇ ಈ ಸಾರವಸ್ತುವನ್ನು ಪಡೆಯುವುದಕ್ಕೆ. ಆದರೆ ಅದನ್ನು ಬಿಟ್ಟು ಮರ, ಕೊಂಬೆ, ಎಲೆಗಳನ್ನು ಎಣಿಸುವುದರಲ್ಲಿ ಅಂದರೆ ಹಣ, ಕೀರ್ತಿ, ಅಧಿಕಾರ ಇತ್ಯಾದಿಗಳಲ್ಲಿ ಮಗ್ನರಾಗಿದ್ದೇವೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ಎಚ್ಚರಿಸುತ್ತಾರೆ, ಮರ ಮುಂತಾದುವುಗಳನ್ನು ಎಣಿಸುವುದರಲ್ಲಿ ಮಗ್ನರಾಗಿ ಹಣ್ಣು ತಿನ್ನುವುದನ್ನು ಮರೆಯಬೇಡಿ, ಎಂದು.

## ಹಣ್ಣನ್ನು ಪಡೆಯಲು ಶ್ರಮಪಡಬೇಕು

ಹಣ್ಣು ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುವುದಿಲ್ಲ—ಎಲೆಗಳ ಮರೆಯಲ್ಲಿ ಅಡಗಿರುತ್ತದೆ. ಬೇರೆ ಕಡೆ ಗಮನ ಹರಿಸದೆ ನೋಡಿದಾಗಲೇ ಅದು ಕಣ್ಣಿಗೆ ಗೋಚರಿಸುವುದು. ಹಾಗೆಯೇ ಈ ಪ್ರಪಂಚದಲ್ಲಿ ಭಗವದ್ ವಸ್ತುವೂ ಅಗೋಚರವಾಗಿರುತ್ತದೆ. ನಮ್ಮ ಆಂತರಿಕ

ಪ್ರಪಂಚದಲ್ಲಿ ಎಲ್ಲ ಚಿತ್ತವೃತ್ತಿಗಳು ಶಾಂತವಾದಾಗ ಭಗವದ್ ವಸ್ತುವಿನ ಇರುವಿಕೆಯ ಅರಿವಾಗುತ್ತದೆ.

ಅಷ್ಟೇ ಅಲ್ಲದೆ, ಮರದಲ್ಲಿ ಹಣ್ಣು ಸಿಗಬೇಕಾದರೆ ನಾವು ಮರವನ್ನು ಹತ್ತಿ ಮೇಲೇರಬೇಕು. ಮರವನ್ನು ಹತ್ತುವುದು ಅಷ್ಟು ಸುಲಭವಲ್ಲ, ಬೀಳುವ ಸಂಭವ ಜಾಸ್ತಿ. ಹಾಗೆಯೇ ನಾವು ಭಗವದ್ವಸ್ತುವನ್ನು ಪಡೆಯಬೇಕಾದರೆ ಆಧ್ಯಾತ್ಮಿಕ ಸಾಧನೆಯಲ್ಲಿ ಮೇಲೇರಿ ಹೋಗಬೇಕು. ತುಂಬ ಎಚ್ಚರಿಕೆಯಿಂದ ಮೇಲೇರಬೇಕು, ಏಕೆಂದರೆ ಬೀಳುವ ಸಂಭವ ಅಧಿಕ. ಕಠೋಪನಿಷತ್ತು ಹೇಳುವಂತೆ, ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವುದೆಂದರೆ ಕತ್ತಿಯ ಅಲಗಿನ ಮೇಲೆ ನಡೆದಂತೆ.

### ಸಿಪ್ಪೆಯನ್ನು ತಿನ್ನಬೇಡಿ

ಹಣ್ಣನ್ನು ಕಿತ್ತಮೇಲೆ ಅದನ್ನು ಸಂಪೂರ್ಣವಾಗಿ ತಿನ್ನುವುದಿಲ್ಲ. ಅದರ ಸಿಪ್ಪೆ ಮತ್ತು ಗೊರಟವನ್ನು ಬಿಸುಟು ಕೇವಲ ತಿರುಳನ್ನು ಮಾತ್ರ ತಿನ್ನುತ್ತೇವೆ. ಹಾಗೆಯೇ ಭಗವದ್ ವಸ್ತುವಿನ ಸುತ್ತಲೂ ಮತತತ್ತ್ವ, ಆಚಾರ ಮುಂತಾದ ಆವರಣಗಳಿವೆ. ಇವೆಲ್ಲ ಹಣ್ಣಿನ ತಿರುಳಿನ ಸುತ್ತ ಇರುವ ಸಿಪ್ಪೆ ಇದ್ದಂತೆ ಎಂದು ಶ್ರೀರಾಮಕೃಷ್ಣರೇ ಹೇಳುತ್ತಾರೆ. ತಿರುಳಿನ ರಕ್ಷಣೆಗೆ ಇವು ಆವಶ್ಯಕ. ಆದರೆ ಅನೇಕರು ಬರಿ ಸಿಪ್ಪೆಯನ್ನೇ ತಿನ್ನುತ್ತ ತಿರುಳಾದ ಭಗವದ್ವಸ್ತುವನ್ನು ಮರೆಯುತ್ತಾರೆ. ರವೀಂದ್ರನಾಥ ಠಾಕುರರು ಹೇಳುವಂತೆ, 'ನಿನ್ನ ಪೂಜೆಯ ನೆವದಲ್ಲಿ ನಿನ್ನನ್ನೇ ಮರೆತುಬಿಡುತ್ತೇನೆ,' (ತೋಮಾರ್ ಪೂಜಾರ್ ಛಲೇ ತೋಮಾಯ್ ಭುಲೇಇ ಥಾಕಿ!). ಪೂಜೆ ಹೇಗೆ ಮಾಡಬೇಕು, ಏನೇನು ವಸ್ತುಗಳನ್ನು ಬಳಸಬೇಕು, ಏನೇನು ನೈವೇದ್ಯ ಮಾಡಬೇಕು—ಇವೇ ಮುಂತಾದ ವಿವರಣೆಗಳಲ್ಲಿಯೇ ಮನಸ್ಸು ಮಗ್ನವಾಗಿ ಪೂಜ್ಯ ವಸ್ತುವನ್ನು ಮರೆತೇ ಬಿಡುತ್ತೇವೆ—ಅಥವಾ ಚಿಂತಿಸುವುದಕ್ಕೆ ಸಮಯವೇ ಇರುವುದಿಲ್ಲ. ಹೀಗೆ ನಾವು ಸಿಪ್ಪೆಯನ್ನು ಹಿಡಿದುಕೊಂಡು ತಿರುಳನ್ನು ಮರೆತುಬಿಡುತ್ತೇವೆ.

> ವ್ಯಕ್ತಿಯ ಅಸ್ತಿತ್ವಕ್ಕೆ ಒಂದು ವಿಶಾಲ ಅರ್ಥವಿದ್ದರೆ ಆಗ ಅವನು ಕೇವಲ ಗಳಿಸುವುದು ಮತ್ತು ವ್ಯಯಿಸುವ ಸ್ಥಿತಿಯನ್ನು ದಾಟಿಹೋಗುತ್ತಾನೆ. ಅವನು ಈ ಅರ್ಥವನ್ನು ಕಳೆದುಕೊಂಡರೆ ಅವನ ಜೀವನವು ಅಸ್ಥಿರವೂ ದುಃಖಮಯವೂ ಆಗುತ್ತದೆ.
>
> —ಸಿ.ಜಿ. ಯುಂಗ್

### ಮೊದಲು ಯಜಮಾನನನ್ನು ಸಂಧಿಸಿ

ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ನಾವು ಮೊದಲು ಹಣ್ಣನ್ನು ತಿನ್ನಬೇಕು, ಅನಂತರ ಇಷ್ಟವಾದರೆ ಮರ ಎಣಿಸುವುದು, ಕೊಂಬೆ ಎಣಿಸುವುದು ಇತ್ಯಾದಿಗಳನ್ನು ಮಾಡಬಹುದು. ಅವರು ಇನ್ನೊಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು: ನಾವು ಒಬ್ಬ ಜಮೀನ್ದಾರನನ್ನು ನೋಡಲು ಹೋದಾಗ ಮೊದಲು ಹೇಗಾದರೂ ಮಾಡಿ—ಕಾಂಪೌಂಡ್ ಹಾರಿಯೋ, ಬಾಗಿಲು ಕಾಯುವವನನ್ನು ಅತ್ತ ತಳ್ಳಿಯೋ—ಅವನನ್ನು ನೋಡಿ ಮಾತನಾಡಿಸಿ ಸ್ನೇಹ ಬೆಳೆಸಿಕೊಳ್ಳಬೇಕು. ಅನಂತರ ನಾವಿಷ್ಟಪಟ್ಟರೆ ಅವನೇ ತನ್ನ ಹೊಲ, ಗದ್ದೆ ಮುಂತಾದುವುಗಳನ್ನೆಲ್ಲ ತೋರಿಸುತ್ತಾನೆ. ಮೊದಲೇ ನಾವು ಸುತ್ತಾಡಲು ಹೋದರೆ ಅದು ಒಂದು ರೀತಿಯ ಕಳ್ಳತನವೇ ಆಗುತ್ತದೆ. ಅಪರಿಚಿತರ ತೋಟದಲ್ಲಿ ಅವರ ಅನುಮತಿಯಿಲ್ಲದೆ ಓಡಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ಹಾಗೆ ಮಾಡಿದರೆ ನಮ್ಮನ್ನು ಕಳ್ಳರು ಎಂದು ಹಿಡಿದು ಬಂಧಿಸಬಹುದು. ಹಾಗೆಯೇ ನಾವು ಜಗತ್ತಿನ ಒಡೆಯನಾದ ಭಗವಂತನನ್ನು ಸಂಧಿಸಿ ಪರಿಚಯ ಮಾಡಿಕೊಳ್ಳದೆ ಜಗತ್ತಿನ ಆಗುಹೋಗುಗಳಲ್ಲಿ ತೊಡಗಿದರೆ ಬಂಧನಕ್ಕೆ ಒಳಗಾಗಬೇಕಾಗುತ್ತದೆ.

ನಿಜವಾಗಿ ಈ ಜಗತ್ತು ನಮ್ಮದಲ್ಲ. ಈ ಪ್ರಪಂಚದಲ್ಲಿ ಇರುವುದೆಂದರೆ ಆಸ್ಪತ್ರೆಯಲ್ಲಿ ದಾಖಲಾದಂತೆ. ಒಮ್ಮೆ ಆಸ್ಪತ್ರೆಯಲ್ಲಿ ದಾಖಲಾದರೆ ರೋಗ ವಾಸಿಯಾಗುವವರೆಗೂ ಹೊರಬರುವಂತಿಲ್ಲ—ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಆಸ್ಪತ್ರೆಗೆ ಯಾರೂ ಅಲ್ಲಿಯೇ ಶಾಶ್ವತವಾಗಿ ಇರಲು ಹೋಗುವುದಿಲ್ಲ. ಆಸ್ಪತ್ರೆಗೆ ಹೋಗುವುದಕ್ಕೂ ಯಾರೂ ಇಷ್ಟಪಡುವುದಿಲ್ಲ. ಆಸ್ಪತ್ರೆಗೆ ಹೋಗದೆ ಇರಬೇಕಾದರೆ ನಾವು ರೋಗಮುಕ್ತರಾಗಿರಬೇಕು. ಮೊದಲು ಭಗವಂತನನ್ನು ಪಡೆದು ಭವರೋಗ ಮುಕ್ತರಾದರೆ ಈ ಪ್ರಪಂಚದ ಆಸ್ಪತ್ರೆಯಲ್ಲಿ ದಾಖಲಾಗಬೇಕಾದ ಆವಶ್ಯಕತೆಯಿಲ್ಲ. ಆಗ ಆಸ್ಪತ್ರೆಯಲ್ಲಿ ವೈದ್ಯರಂತೆ ಅನೇಕ ರೋಗಿಗಳ ಸೇವೆ ಮಾಡಬಹುದು. ಅದಕ್ಕೇ ಶ್ರೀರಾಮಕೃಷ್ಣರು ಮೊದಲು ಭಗವಂತನನ್ನು ಪಡೆಯಿರಿ, ಅನಂತರ ಬೇರೆ ವಿಚಾರ—ಎನ್ನುತ್ತಿದ್ದರು.

### ಶೂನ್ಯ ಪೂರ್ಣವಾಗಬೇಕು

ಅವರು ಹೇಳುತ್ತಾರೆ: ಕೇವಲ ಸೊನ್ನೆಗೆ ಯಾವ ಬೆಲೆಯೂ ಇಲ್ಲ, ಆದರೆ ಅದರ ಹಿಂದೆ ಒಂದನ್ನು ಸೇರಿಸಿದರೆ ಅದಕ್ಕೆ ಬೆಲೆ ಬರುತ್ತದೆ. ಅನಂತರ ಸೊನ್ನೆಯನ್ನು ಸೇರಿಸಿದಷ್ಟೂ ಅದರ ಬೆಲೆ ಹೆಚ್ಚುತ್ತಾ ಹೋಗುತ್ತದೆ. ಹಾಗೆಯೇ ಈ ಜೀವನ ಕೇವಲ ಸೊನ್ನೆ. ಅದಕ್ಕೆ ಒಂದನ್ನು ಅಂದರೆ ಭಗವಂತನನ್ನು ಸೇರಿಸಿದರೆ ಬೆಲೆ ಬರುತ್ತದೆ. ಅನಂತರ ನಾವು ಏನೇ ಮಾಡಿದರೂ ಅದರ ಬೆಲೆ ಅಧಿಕವಾಗುತ್ತ ಹೋಗುತ್ತದೆ. ಆದ್ದರಿಂದ ಜೀವನ ಸಾರ್ಥಕ್ಯವನ್ನು ಪಡೆಯಬೇಕಾದರೆ ನಾವು ಒಂದನ್ನು ಅಂದರೆ ಭಗವಂತನನ್ನು ಪಡೆಯಬೇಕು.

ಅಂಕಗಣಿತದಲ್ಲಿ ಸೊನ್ನೆ ಅತ್ಯಂತ ವಿಶಿಷ್ಟವಾದುದು. ಅದಕ್ಕೆ ತಾನೇ ತಾನಾಗಿ ಯಾವ ಬೆಲೆಯೂ ಇಲ್ಲ, ಅದು ಇತರ ಸಂಖ್ಯೆಗಳೊಡನೆ ಇದ್ದಾಗ ಮಾತ್ರ ಬೆಲೆ. ಬೇರೆ ಎಲ್ಲ ಸಂಖ್ಯೆಗಳಿಗೆ ಸ್ವತಂತ್ರವಾದ ಬೆಲೆ ಇದೆ. ಆದರೆ ಸೊನ್ನೆಗೆ ತನ್ನದೇ ಆದ ಬೆಲೆ ಇಲ್ಲ. ಆದರೆ ಅದರ ಹಿಂದೆ ಒಂದು ಸಂಖ್ಯೆಯನ್ನು ಸೇರಿಸಿ, ಮುಂದೆ ಎಷ್ಟೇ ಸೊನ್ನೆ ಸೇರಿಸುತ್ತ ಹೋದರೂ ಅದರ ಬೆಲೆ ಅಧಿಕವಾಗುತ್ತದೆ. ಹಿಂದೆ ಅಂಕಿಯನ್ನು ಸೇರಿಸದೆ ಮುಂದೆ ಎಷ್ಟೇ ಸೊನ್ನೆಗಳನ್ನು ಸೇರಿಸಿದರೂ ಆ ಸೊನ್ನೆಗೆ ಬೆಲೆಯಿಲ್ಲ. ಹಾಗೆಯೇ ಜೀವನಕ್ಕೂ ತನ್ನದೇ ಆದ ಯಾವ ಬೆಲೆಯೂ ಇಲ್ಲ. ಅದು

ಎಲ್ಲದರಿಂದ ಸಂಪೂರ್ಣ ಬೇರೆಯಾಗಿದ್ದರೆ ಅದಕ್ಕೆ ಯಾವ ಮೌಲ್ಯವೂ ಇಲ್ಲ. ಆದ್ದರಿಂದಲೇ ವ್ಯಕ್ತಿಯು ಇತರರಿಂದ ಸಂಪೂರ್ಣ ಬೇರೆಯಾಗಿದ್ದರೆ, ತಾನೂ ಇತರರಿಗೆ ಬೇಡವಾಗಿ, ಇತರರೂ ತನಗೆ ಬೇಡವಾದಾಗ ಅವನು ಜೀವನದಲ್ಲಿ ಶೂನ್ಯತೆಯನ್ನು ಅನುಭವಿಸುತ್ತಾನೆ. ಈ ಶೂನ್ಯತೆ ಕೇವಲ ಇತರರೊಡನೆ ಬೆರೆಯುವುದರಿಂದ—ಜೀವನಕ್ಕೆ ಏನೇನೊ ವಸ್ತುಗಳನ್ನು ವ್ಯಕ್ತಿಗಳನ್ನು ಸೇರಿಸುವುದರಿಂದ ಹೋಗುವುದಿಲ್ಲ. ಅದಕ್ಕೆ ಒಂದು ಆಧ್ಯಾತ್ಮಿಕ ಹಿನ್ನೆಲೆ ಇದ್ದರೆ ಆಗ ಅದಕ್ಕೆ ಸಾರ್ಥಕತೆ ಬರುತ್ತದೆ. ಅನಂತರ ಏನೇ ಸೇರಿಸಿದರೂ ಅದರ ಬೆಲೆ ಅಧಿಕವಾಗುತ್ತ ಹೋಗುತ್ತದೆ. ಆದ್ದರಿಂದ ಮೊದಲು ನಮ್ಮ ಜೀವನದ ಖಾಲಿತನವನ್ನು ಹೋಗಲಾಡಿಸಬೇಕು. ಆಂತರಿಕ ಸಫಲತೆಯೊಡನೆ ನಾವು ಏನೇ ಮಾಡಿದರೂ ಅದು ಅರ್ಥಪೂರ್ಣವಾಗುತ್ತದೆ.

## ಮೊದಲು ಆತ್ಮವಿಕಾಸ

ಇದಕ್ಕೆ ದೃಷ್ಟಾಂತ ಸ್ವರೂಪವಾಗಿ ಶ್ರೀರಾಮಕೃಷ್ಣರು ಒಂದು ಕಥೆ ಹೇಳುತ್ತಿದ್ದರು. ಒಂದು ಊರಿನಲ್ಲಿ ಒಂದು ಪಾಳು ಗುಡಿ ಇತ್ತು. ಅದಕ್ಕೆ ಯಾರೂ ಹೋಗುತ್ತಿರಲಿಲ್ಲ. ಒಂದು ದಿನ ಆ ಗುಡಿಯಿಂದ ಶಂಖಧ್ವನಿ ಕೇಳಿಸತೊಡಗಿತು. ಎಲ್ಲರೂ ಆಶ್ಚರ್ಯದಿಂದ ಅಲ್ಲಿಗೆ ಧಾವಿಸಿದರು. ಊರಿನ ಪದ್ಮೊ ಎಂಬ ಪೆದ್ದ ಹುಡುಗನು ಆ ಗುಡಿಯ ಹೊರಗೆ ನಿಂತು ಶಂಖ ಊದುತ್ತಿದ್ದ. ಊರಿನವರು ಅವನಿಗೆ ಹೇಳಿದರು: 'ಅಯ್ಯಾ, ಪೆದ್ದ, ಗುಡಿಯನ್ನು ಸ್ವಚ್ಛಗೊಳಿಸಿಲ್ಲ, ರಿಪೇರಿ ಮಾಡಿಲ್ಲ, ವಿಗ್ರಹ ಪ್ರತಿಷ್ಠೆ ಆಗಿಲ್ಲ. ಸುಮ್ಮನೆ ಶಂಖ ಊದುತ್ತಿದ್ದೀಯಲ್ಲ!' ಇದರಂತೆ ನಮ್ಮ ಜೀವನದ ಗುಡಿ ಮೊದಲು ದುರಸ್ತಿಯಾಗಬೇಕು—ಅಂದರೆ ಮೊದಲು ನಮ್ಮ ವ್ಯಕ್ತಿತ್ವ ಸಮತೋಲನವನ್ನು ಪಡೆಯಬೇಕು. ಅನಂತರ ಈ ಗುಡಿಯನ್ನು ಸ್ವಚ್ಛಗೊಳಿಸಬೇಕು—ಅಂದರೆ ನೈತಿಕ ಪರಿಪೂರ್ಣತೆಯೊಂದಿಗೆ ಪರಿಶುದ್ಧ ಜೀವನವನ್ನು ನಡೆಸಬೇಕು. ಮುಂದೆ ಆಧ್ಯಾತ್ಮಿಕ ಸಾಧನೆಯ ಮೂಲಕ ವಿಗ್ರಹ ಪ್ರತಿಷ್ಠಾಪನೆಯಾಗಬೇಕು, ಅಂದರೆ ನಮ್ಮ ಆಧ್ಯಾತ್ಮಿಕ ನೆಲೆಯಲ್ಲಿ ನಾವು ನಿಲ್ಲಬೇಕು. ಆಗ ಶಂಖ ಊದುವುದು, ಜಾಗಟೆ ಬಾರಿಸುವುದು ಮುಂತಾದ ಸಾಮಾಜಿಕ ವ್ಯವಹಾರಗಳು ಅರ್ಥಪೂರ್ಣವಾಗುತ್ತವೆ. ಇಲ್ಲದಿದ್ದರೆ ತನ್ನ ಆಧ್ಯಾತ್ಮಿಕ ಒಳಿತಿಗಲ್ಲದೆ ಕೇವಲ ಇತರರಿಗಾಗಿ ಪೂಜೆ ಮಾಡುವ ಪೂಜಾರಿಯಂತೆ ನಮ್ಮ ಜೀವನವಾಗುತ್ತದೆ, ಎಲ್ಲರಿಗೂ ಮನೆಯನ್ನು ಕಟ್ಟಿಕೊಟ್ಟು ತಾವು ಮಾತ್ರ ಪಾಳು ಗುಡಿಸಲಿನಲ್ಲಿ ವಾಸಿಸುವ ಕೂಲಿಗಳಂತೆ ಇರುತ್ತೇವೆ.

> ಪರಿಪೂರ್ಣ ವ್ಯಕ್ತಿಯು ತನ್ನ ಮನಸ್ಸನ್ನು ಕನ್ನಡಿಯಂತೆ ಬಳಸಿಕೊಳ್ಳುತ್ತಾನೆ. ಕನ್ನಡಿ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ, ಯಾವುದನ್ನೂ ತಿರಸ್ಕರಿಸುವುದೂ ಇಲ್ಲ. ಅದು ಸ್ವೀಕರಿಸುತ್ತದೆ, ಆದರೆ ತನಗಾಗಿ ಇಟ್ಟುಕೊಳ್ಳುವುದಿಲ್ಲ.
>
> —ಚು ಆಂಗ್ ಟ್ಸು.

## ಜೀವನ ಕುಸುಮವರಳಲಿ

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಹೂವು ಅರಳಿದಾಗ ದುಂಬಿಗಳು ತಾವಾಗಿಯೇ ಬಂದು ಮುತ್ತುತ್ತವೆ, ಎಂದು. ಹೂವು ಪೂರ್ಣವಿಕಾಸವನ್ನು ಹೊಂದಿ, ಅದರಲ್ಲಿ ಮಕರಂದ ಪರಿಪಕ್ವವಾದಾಗ ದುಂಬಿಗಳು ಬರುತ್ತವೆ. ಆಗ ಹೂವು ದುಂಬಿಗಳಿಗಾಗಿ ತನ್ನನ್ನು ತೆರೆದಿಡುತ್ತದೆ. ಅದಕ್ಕೆ ಮೊದಲು ಅದು ಮೊಗ್ಗಾಗಿ ಆಂತರಿಕ ಬೆಳವಣಿಗೆಯನ್ನು ಸಾಧಿಸುತ್ತದೆ. ಹಾಗೆಯೇ ನಮ್ಮ ಬದುಕೂ ಕೂಡ. ಆಂತರಿಕ ಬೆಳವಣಿಗೆಯ ಮೂಲಕ ನಮ್ಮ ಬಾಳು ಪರಿಪಕ್ವತೆಯನ್ನು ಮುಟ್ಟಿದಾಗ ನಮ್ಮನ್ನು ನಾವು ಪ್ರಪಂಚಕ್ಕೆ ತೆರೆದುಕೊಳ್ಳಬಹುದು. ಹೂವರಳುವಂತೆ ನಮ್ಮ ವ್ಯಕ್ತಿತ್ವ ಅರಳಬೇಕು. ಪ್ರೀತಿಯ ಸುಗಂಧವನ್ನು ಅದು ಸ್ಫುರಿಸುತ್ತಿರಬೇಕು, ಸದ್ಗುಣ ವರ್ಣಗಳಿಂದ ಅದು ಶೋಭಿಸಬೇಕು; ಸಜ್ಜನಿಕೆಯ ಸೌಂದರ್ಯದಿಂದ ಅದು ಆಕರ್ಷಕವಾಗಿರಬೇಕು. ಆಗ ದುಂಬಿಗಳೇ ಆ ಹೂವಿನೆಡೆಗೆ ಹೆಚ್ಚಾಗಿ ಧಾವಿಸಿ ಬರುತ್ತವೆ, ನೊಣಗಳಲ್ಲ.

ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆಗಳ ಮೂಲಕ ನಮ್ಮ ಬದುಕನ್ನು ಮೊದಲು ಸಾರ್ಥಕಗೊಳಿಸಬೇಕು. ಈ ಸಾರ್ಥಕತೆಯೇ ನಿಜವಾದ ಸುಖವನ್ನು ನೀಡುತ್ತದೆ. ಅನಂತರ ನಾವು ಸಾಮಾಜಿಕ ರಂಗಕ್ಕೆ ಇಳಿದು ಇತರರಿಗೆ ಹಿತವನ್ನು ಉಂಟುಮಾಡಬಹುದು. ಆಗ ನಮ್ಮ ಮನಸ್ಸು ಪ್ರಾಪಂಚಿಕ ವಿಷಯಗಳಿಂದ ಕಲುಷಿತವಾಗದೆ ಉಳಿಯುತ್ತದೆ—ಅದು ಎಲ್ಲವನ್ನೂ ಸ್ಪರ್ಶಿಸಿ ಯಾವುದಕ್ಕೂ ಅಂಟಿಕೊಳ್ಳದೆ ಇರುತ್ತದೆ. ನಾವು ಮೊದಲು ಸಾರ್ಥಕತೆಯನ್ನು ಪಡೆದು ಇತರರ ಜೀವನವನ್ನು ಸಾರ್ಥಕಗೊಳಿಸುವುದು—ಇದು ಶ್ರೀರಾಮಕೃಷ್ಣರ ಅಭಿಪ್ರಾಯ. ಇಲ್ಲದಿದ್ದರೆ ನಮ್ಮ ಜೀವನವು, ಶ್ರೀರಾಮಕೃಷ್ಣರು ಹೇಳುವಂತೆ, ಎಲ್ಲರಿಗೂ ಉಪದೇಶಿಸಿ ಮುಕ್ತಿಮಾರ್ಗವನ್ನು ತೋರಿಸಿ ತಾನು ಮಾತ್ರ ಪ್ರಾಪಂಚಿಕತೆಯ ಕೆಸರಿನಲ್ಲಿ ಮುಳುಗಿರುವ ಪಂಡಿತನಂತಾಗುತ್ತದೆ. ಶ್ರೀರಾಮಕೃಷ್ಣರು ತಮ್ಮ ಉಪದೇಶದ ಮೂಲಕ ಮಾತ್ರವಲ್ಲದೆ ಜೀವನದ ಮೂಲಕವೂ ಈ ಆದರ್ಶವನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಆಧುನಿಕ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ಸಂದೇಶವಿದು: 'ಸಿದ್ಧಾಂತಗಳನ್ನು ಲೆಕ್ಕಿಸಬೇಡಿ, ಮೂಢನಂಬಿಕೆಗಳನ್ನು ಲೆಕ್ಕಿಸಬೇಡಿ, ಕೋಮು, ಚರ್ಚು, ದೇವಸ್ಥಾನ ಇವುಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವನ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಇವನ್ನು ಹೋಲಿಸಿದರೆ ಇವಕ್ಕೆ ಬೆಲೆಯಿಲ್ಲ. ಮನುಷ್ಯನಲ್ಲಿ ಇದು ಹೆಚ್ಚು ವಿಶದವಾಗಿ ಸ್ಪಷ್ಟವಾಗಿ ತೋರಿದಷ್ಟೂ ಸತ್ಕಾರ್ಯಸಾಧನೆಗೆ ಅವನು ಮಹಾಶಕ್ತಿಯಾಗುವನು. ಮೊದಲು ಅದನ್ನು ಸಂಪಾದಿಸಿ, ಸಾಧಿಸಿ, ಯಾರನ್ನೂ ದೂರಬೇಡಿ. ಎಲ್ಲಾ ಸಿದ್ಧಾಂತಗಳಲ್ಲೂ ಪಂಥಗಳಲ್ಲೂ ಸ್ವಲ್ಪ ಸತ್ಯವಿದೆ. ಧರ್ಮವೆಂದರೆ ಮಾತಲ್ಲ, ಹೆಸರಲ್ಲ, ಪಂಥವಲ್ಲ; ಅದು ಆಧ್ಯಾತ್ಮಿಕ ಸಾಕ್ಷಾತ್ಕಾರವೆಂಬುದನ್ನು ನಿಮ್ಮ ಜೀವನದಲ್ಲಿ ತೋರಿ. ಯಾರು ಇದನ್ನು ಅನುಭವಿಸುವರೊ, ಅವರು ಮಾತ್ರ ಇದನ್ನು ತಿಳಿದುಕೊಳ್ಳಬಲ್ಲರು. ಯಾರಲ್ಲಿ ಆಧ್ಯಾತ್ಮಿಕತೆ ಇದೆಯೊ ಅವರು ಮಾತ್ರ ಮತ್ತೊಬ್ಬರಿಗೆ ಇದನ್ನು ಕೊಡಬಲ್ಲರು, ಮಾನವ ಕೋಟಿಯ ಮಹಾ ಗುರುಗಳಾಗಬಲ್ಲರು. ಅವರೇ ಜ್ಞಾನಶಕ್ತಿ.(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, 7:148).